ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ತರೀಕೆರೆ ಈಸ ಬಾ ಮಾರ್ಕೆಟ್ಟಿನಲ್ಲಿ ಸ೯ 1904ನೆ ಇಸವಿ ಜುಲೈ 1ರ ಲಾಗಾಯತು ಸ೯ 1905ನೆ ಇಸವಿ ಜೂ೯ ಆಖೈರು ವರಿಗೆ ತೆರಿಗೆ ವಸೂಲು ಮಾಡುವ ಹಕ್ಕುದಾರಿಯನ್ನು ತರೀಕೆರೆ ತಾಲ್ಲೂಕು ಕಚೇರಿಯಲ್ಲಿ ಆ ತಾಲ್ಲೂಕು ಅಮಲ್‌ದಾರ್‌ರವರಿಂದ ಸ೯ 1904ನೆ ಇಸವಿ ಜೂ೯ 25ನೆ ಶನಿವಾರ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಬಾಕೀ ತಪಶೀಲುಗಳನ್ನು ತಾರೀಖು 9—6—1904ನೆ ಮಾರ್ಚ್ ನಂಬರ್ 23ನೆ ಮೈಸೂರು ಗೆಜೆಟ್ಟಿನ IIನೆ ಭಾಗದ 360ನೆ ಪುಟದಲ್ಲಿ ಘಾಯಿಷ್ ಮಾಡಿರುತ್ತೆ.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ ಗೋಷ್ವಾರೆ.

ಚಿತ್ರದುರ್ಗ, ತಾರೀಖು 9ನೆ ಜೂ೯ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಚಿತ್ರದುರ್ಗ ಡಿಸ್ಟ್ರಿಕ್ಟ್ ಚಿತ್ರದುರ್ಗ ತಾಲ್ಲೂಕು ಕಸವನ ಹಳ್ಳಿ, ಮಾಳೇನಹಳ್ಳಿ, ವಡ್ಡಿನಹಳ್ಳಿ ಈ ಜೋಡಿ ಮತ್ತು ಖಾಯಂಗುತ್ತಾ ಗ್ರಾಮಗಳಲ್ಲಿ ಸುಬ್ಬಾಯಶಾಸ್ತ್ರಿ ವಗೈರೇರಿಗೆ ಇರುವ ಹಕ್ಕು ಬಾಧ್ಯತೆಯನ್ನು 1902—1903ನೆ ಸಾಲಿನ ಕಂದಾಯದ ಬಾಕೀಗಾಗಿ ಚಿತ್ರದುರ್ಗದ ತಾಲ್ಲೂಕು ಕಚೇರಿಯಲ್ಲಿ, 1904ನೆ ಜೂ೯ 28, 29, 30ನೆ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಜಾಸ್ತಿ ತಪಶೀಲು 9—6—1904ನೆ ಮಾರ್ಚ್ 23ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 361ನೆ ಪುಟದಲ್ಲಿ ನಮೂದಾಗಿರುವದನ್ನು ನೋಡಲಾಗಿ ತಿಳಿಯಲಾಗುತ್ತೆ.

ತಾರೀಖು 8ನೆ ಜೂ೯ 1904.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರದ ನೇತುವೆಯ ಮೇಲೆ 1904ನೆ ಜುಲೈ ಗುರ್ರೆ ಲಾಗಾಯಿತು 1905ನೆ ಜೂ೯ ಆಖೈರು ವರಿವಿಗೆ ಹನ್ನೆರಡು ತಿಂಗಳ ಕಾಲ ಸುಂಕವನ್ನು ವಸೂಲ್ಮಾಡುವ ಹಕ್ಕನ್ನು ಹರಿಹರದ ಸಬ್ ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಜೂ೯ ತಾರೀಖು 20ನೆ ದಿವಸ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಅಥವಾ ಅವರಿಂದ ಅಧಿಕಾರ ಹೊಂದಿದ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬು ರೂಬ್ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಹರಾಜು ಷರತ್ತುಗಳು ಮತ್ತು ಇತರ ತಪಶೀಲುಗಳನ್ನು 31—5—1904ನೆ ತಾರೀಖಿನ ಇಸ್ತಿಹಾರ್‌ನಾಮೆಯಲ್ಲಿ ಘಾಯಿಷ್ ಮಾಡಿರುತ್ತೆ. ಸದರಿ ಇಸ್ತಿಹಾರ್‌ನಾಮೆಯು ಮೈಸೂರು ಗೆಜೆಟ್ IIನೆ ಭಾಗದ 362ನೆ ಪುಟದಲ್ಲಿ ಘಾಯಿಷ್ ಆಗಿರುತ್ತೆ.

ಹೆಚ್. ರಾಮಾನುಜಯ್ಯಂಗಾರ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವೀಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ೯ 1903—1904ನೆ ಇಸವಿ ಮಿಃ ಅರ್ಜೀ ನಂಬರ್ 384.

ಮೃತಪಟ್ಟ ಎಂ. ನಂಜುಂಡಶಾಸ್ತ್ರಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ಅರಳೀಪೇಟೆಯಲ್ಲಿ ಇರುವ ಅಕ್ಕಯ್ಯಮ್ಮ ಎಂಬುವರು, ಮೃತಪಟ್ಟ ಸದರೀ ಎಂ. ನಂಜುಂಡಶಾಸ್ತ್ರಿಯವರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಎಂ. ನಂಜುಂಡಶಾಸ್ತ್ರಿಯವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ೯ 1901ನೆ ಇಸವಿ 7ನೆ ರೆಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಕ್ಕಯ್ಯಮ್ಮ ಎಂಬುವರ ಅರ್ಜಿಯನ್ನು ಸ೯ 1904ನೆ ಇಸವಿ ಜುಲೈ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಂ. ನಂಜುಂಡಶಾಸ್ತ್ರಿಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1904ನೆ ಇಸವಿ ಜೂ೯ ತಿಂಗಳು ನೆ ತಾರೀಖಿನಲ್ಲಿ ಕೋರ್ಟ್ ವೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಸಾಗಿದೆ.

ಸ೯ 1903—1904ನೆ ಇಸವಿ ಮಿ|| ಅರ್ಜೀ ನಂಬರ 399.

ಮೃತಪಟ್ಟ ಗುರಣ್ಣನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರು) ಬೆಂಗಳೂರು ತಾಲ್ಲೂಕು ದೀಗೂರು ಹೋಬಳಿ ವಿಶ್ವಸಂದ್ರ ಗ್ರಾಮದಲ್ಲಿನವ ಕುರಿ ಲಿಂಗಂಣ ಎಂಬುವರು, ಮೃತಪಟ್ಟ ಸದರೀ ಗುರಣ್ಣನಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ವಿಶ್ವಸಂದ್ರ ಗ್ರಾಮದ ವಾಸಸ್ಥರಾಗಿ ಮೃತಪಟ್ಟ ಗುರಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲು ಮಾಡುವದಕ್ಕೆ ಸ೯ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಕುರಿ ಲಿಂಗಂಣ ಎಂಬುವರ ಅರ್ಜಿಯನ್ನು ಸ೯1904ನೆ ಇಸವಿ ಜುಲೈ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಗುರಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1904ನೆ ಇಸವಿ ಜೂ೯ ತಿಂಗಳು ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ೯ 1903—1904ನೆ ಇಸವಿ ಮಿ|| ಅರ್ಜೀ ನಂಬರ 405.

ಮೃತಪಟ್ಟ ರಾಮಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಹಾಲಿ ಬೆಂಗಳೂರು ಸಿದ್ದಿಕಟ್ಟೆಯಲ್ಲಿ ವಾಸವಾಗಿರುವ ರಾಮಂಣನವರ ಮಗಳು ವೆಂಕವ್ಮ ಎಂಬುವರು, ಮೃತಪಟ್ಟ ಸದರೀ ರಾಮಂಣನವರಿಗೆ ಮುಖ್ಯ ವಾರಸ್‌ದಾರು) ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಡಿಸ್ಟ್ರಿಕ್ಟು ಜನ್ನಪಟ್ಣದ ವಾಸಸ್ಥರಾಗಿ ಮೃತಪಟ್ಟ ರಾಮಂಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ೯ 1901ನೆ ಇಸವಿ 7ನೆ ನಂಬರ್ ರೆಗ್ಯುಲೇಷ್ಣ ಮೇರಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕವ್ಮನೆಂಬುವರ ಅರ್ಜಿಯನ್ನು 1904ನೆ ಇಸವಿ ಜುಲೈ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1904ನೆ ಇಸವಿ ಜೂ೯ ತಿಂಗಳು ನೆ ತಾರೀಖಿನಲ್ಲ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟು ಜಡ್ಜ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ೯ 1903—1904ನೆ ಇಸವಿ ಮಿ|| ಅರ್ಜೀ ನಂಬರ 687.

ಅರ್ಜೀದಾರು) ಬೆಂಗಳೂರು ತಾಲ್ಲೂಕು ಯಕವಂಚಪುರದ ಹೋಬಳಿ ಕಾಚರಕನಹಳ್ಳಿಯಲ್ಲಿ ಇರುವ ಗೆದ್ದಲಹಳ್ಳಿ ಶ್ಯಾನುಭೋಗ ನಾರಣಪ್ಪ, ಮೈನರಾದ ಡಿಟೋ ಕಾಚರಕನಹಳ್ಳಿ ಸ್ಥಳದ ಫವತಿ ವೆಂಕಟರವಣಯ್ಯನ ಮಕ್ಕಳು 1ನೆ ಕೀನಪ್ಪ, 2ನೆ ದಾಸಪ್ಪ ಉರಫ್ ರಾಮಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಕೀನಪ್ಪ ವಗ್ಯೆರೇರಿಗೆ ಸೋದರ ಮಾವನು ಆಗಬೇಕೆಂಬ ಹಕ್ಕಿನಮೇಲೆ ಶ್ಯಾನುಭೋಗ ನಾರಣಪ್ಪನು ಸದರೀ ಮೈನರ್ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ೯ 1904ನೆ ಇಸವಿ ಜೂ೯ ತಾರೀಖು 24ರಲ್ಲು ಪೊಕರರು ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ೯ 1904ನೆ ಇಸವಿ ಜೂ೯ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಏ. ರಂಗಾಚಾರ್,
ಸಬ್ ಜಡ್ಜ್.